<u>ಅಸಲು ದಾವಾ ಸಂಖ್ಯೆ- **01/2021**</u> ಡಿ.<u>ಡಬ್ಲ್ಯೂ:-</u> **1**

ದಿನಾಂಕಃ **20-09-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>

ಶೋಭ ನನ್ನ ಅಕ್ಕನ ಮಗಳು. ಉಷಾ ಎಂಬ ಹೆಸರನ್ನು ಶೋಭ ಎಂದು ಮಾಡಿಕೊಂಡಿದ್ದಾರೆ. ದಿಃ 07-03-1995 ರಂದು ಉಷಾ ಜನನವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಶಾ ಮತ್ತು ಬಿಂದುರವರ ವಯಸ್ಸಿನ ಮಧ್ಯದ ವಯಸ್ಸಿನವರು ಉಷಾ ಇರಬಹುದು. ಉಷಾ ಮತ್ತು ಆಶಾರವರನ್ನು ಕೂಲಂಬಿ ಗ್ರಾಮದಲ್ಲಿರುವ ಅಂಗನವಾಡಿ ಶಾಲೆಗೆ ದಾಖಲು ಮಾಡಿದ್ದರು ಎಂದರೆ ಸಾಕ್ಷಿಯು ನನ್ನ ಮಗಳು ಆಶಾರನ್ನು ನನ್ನ ಯಜಮಾನರು ದಾಖಲು ಮಾಡಿರುತ್ತಾರೆ ಮತ್ತು ಉಷಾರವರನ್ನು ನಮ್ಮ ಅಕ್ಕ ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಉಷಾ ಮತ್ತು ಆಶಾ ರವರ ಅಂಗನವಾಡಿ ದಾಖಲಾತಿಗಳನ್ನು ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಯಜಮಾನರಿಗೆ ಗೊತ್ತು ಎಂದು ನುಡಿಯುತ್ತಾರೆ. ಉಷಾ ಮತ್ತು ಆಶಾ ಅಂಗನವಾಡಿ ಶಾಲೆಗೆ ಒಟ್ಟಿಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಉಷಾಳ ಅಂಗನವಾಡಿ ಶಾಲೆಯ ದಾಖಲಾತಿಗಳಲ್ಲಿ ಅವರ ತಂದೆಯ ಹೆಸರು ಶಾಂತರಾಜ, ತಾಯಿ ರತ್ನಮ್ಮ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಉಷಾ ಳನ್ನು ಅಂಗನವಾಡಿ ಶಾಲೆಗೆ ನಮ್ಮ ಯಜಮಾನರು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಅಕ್ಕ ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಉಷಾಳ ಅಂಗನವಾಡಿ ಶಾಲೆಯಲ್ಲಿ ನನ್ನಅಕ್ಕ ಉಷಾಳ ತಂದೆ ತಾಯಿಯ ಹೆಸರನ್ನು ಶಾಂತರಾಜ್ ಮತ್ತು ರತ್ನಮ್ಮ ಎಂದು ಬರೆಸಿರಬಹುದು ಎಂಬ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ತಾನು ಮತ್ತು ತನ್ನ ಗಂಡ

ಇದ್ದು ಮಧ್ಯದಲ್ಲಿ ನನ್ನ ಅಕ್ಕನ ಮಗಳು ಶೋಭ ಎಂದು ತಿಳಿಸಿದ್ದು, ಸದರಿ ಛಾಯಾಚಿತ್ರವನ್ನು ನಿಪಿ-12 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ಮೆಹೆಂದಿ ಕಲರ್ ಬಟ್ಟೆಯನ್ನು ಹಾಕಿಕೊಂಡಿರುವವರು ಆಶಾದೇವಿ, ಬಿಳಿ ಬಟ್ಟೆಯನ್ನು ಹಾಕಿಕೊಂಡಿರುವವರು ಬಿಂದು ನನ್ನ ಮಕ್ಕಳು ಮತ್ತು ಕಪ್ಪು ಬಟ್ಟೆಯನ್ನು ಹಾಕಿಕೊಂಡಿರುವವರು ನನ್ನ ಅಕ್ಕನ ಮಕ್ಕಳು ಉಷಾ. ಸದರಿ ಛಾಯಾಚಿತ್ರವನ್ನು ನಿಪಿ-13 ಎಂದು ಗುರುತಿಸಲಾಯಿತು. ಉಷಾ ಎಂದರೆ ಶೋಭಾ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ಉಷಾಗೆ ಅವರ ತಾಯಿ ಕೇಕ್ ತಿನ್ನಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಅವರ ತಾಯಿ ಹೇಳಿದ ಮೇರೆಗೆ ನಾನು ಕೇಕನ್ನು ತಿನ್ನಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರವನ್ನು ನಿಪಿ-14 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ನನ್ನ ಅಕ್ಕ ಮಂಜುಳ ಮತ್ತು ಆಕೆಯ ಗಂಡ ನಾಗರಾಜಪ್ಪ ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರವನ್ನು ನಿಪಿ-15 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ಬಲಭಾಗದಲ್ಲಿ ಇರುವುದು ನಾನು, ಎಡಭಾಗದಲ್ಲಿ ಇರುವುದು ನನ್ನ ಅಕ್ಕ. ಸದರಿ ಛಾಯಾಚಿತ್ರವನ್ನು ನಿಪಿ-16 ಎಂದು ಗುರುತಿಸಲಾಯಿತು. ನಮ್ಮ ಯಜಮಾನರು ತೀರಿಕೊಂಡ ಸಮಯದಲ್ಲಿ ಕೈಲಾಸ ಶಿವಗಣಾರಾಧನೆ ಮಾಡಿದ್ದೇವೆ. ಆ ಸಮಯದಲ್ಲಿ ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆಯನ್ನು ಮಾಡಿಸಿದ್ದೆವು. ಸಾಕ್ಷಿಯು ಮುಂದುವರೆದು ಸದರಿ ಕೈಲಾಸ ಶಿವಗಣಾರಾಧನೆ ಪತ್ರಿಕೆಯನ್ನು ನಾಗರಾಜಪ್ಪರವರು ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆಯನ್ನು ಮನೆಯ ಹಿರಿಯರು ಯಾರು ಇರುತ್ತಾರೋ ಅವರ ಹೆಸರಿನಲ್ಲಿ ಮುದ್ರಣ ಮಾಡಿಸುತ್ತಾರೆ ಎಂದರೆ ಸರಿ. ನಿಪಿ-11 ಕೈಲಾಸ ಶಿವಗಣಾರಾಧನೆ ಪತ್ರಿಕೆಯಲ್ಲಿ ನಾಗರಾಜ ಮತ್ತು ಮಂಜುಳರವರ ಹೆಸರು ನಮೂದಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾಗರಾಜ ರವರು ತಮಗೆ ತಿಳಿದ ಹಾಗೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-11 ರಲ್ಲಿ ನನ್ನ ಹೆಸರು,

ಶೋಭ ಮತ್ತು ಬಿಂದುರವರ ಹೆಸರು ಮಾತ್ರ ನಮೂದಾಗಿದೆ ಎಂದರೆ ಸಾಕ್ಷಿಯು ನಮ್ಮನ್ನು ನ್ಯಾಯಾಲಯಕ್ಕೆ ಅಲೆದಾಡಿಸಬೇಕೆಂದು ಆ ರೀತಿ ಮುದ್ರಣ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.